ಅ) ಬೆಂಗಳೂರು ಮಹಾ ನಗರದಲ್ಲಿಂದ ಹರಿದು ಬರುವ ಕೊಳಚೆ ನೀರು ನದಿಯಂತೆ ಹೊರ ಬಿಟ್ಟರಲು ಕಾರಣಗಳೇನು?

ಆ) ಇದರಿಂದಾಗಿ ಪರಿಸರದ ಮಾಲಿನ್ಯತೆ ಉಂಟಾಗಿ ಲಕ್ಷಾಂತರ ಜನ ತೀರ್ವ ಅನಾರೋಗ್ಯಕ್ಕೆ ತುತ್ತಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎ. ಲಕ್ಷ್ಮೀಸಾಗರ (ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರ ಗಳ ಸಚಿವರು)—.

ಅ) ಬೆಂಗಳೂರು ಮಹಾ ನಗರದಿಂದ ಹರಿದು ಬರುವ ಕೊಳಚೆ ನೀರೆನ್ನು ಕೊಳವೆಗಳ ಮೂಲಕ ಹಾಯಿಸಿ ಮೂರು ಮುಖ್ಯ ಕಣಿವೆಗಳಲ್ಲಿ ಎಂದರೆ, ಕೋರಮಂಗಲ ಮತ್ತು ಚಳ್ಳಗಟ್ಟ ಕಣಿವೆ, ವೃಷಭಾವತಿ ಕಣಿವೆ ಹಾಗೂ ಹೆಬ್ಬಾಳ ಕಣಿವೆಗಳಲ್ಲಿ ಹೊರಬಿಡಲಾಗುತ್ತಿದೆ. ಇವುಗಳ ಪೈಕಿ ಕೋರಮಂಗಲ, ಚಳ್ಳಗಟ್ಟ ಕಣಿವೆ ಹಾಗೂ ವೃಷಭಾವತಿ ಕಣಿವೆಗಳಲ್ಲಿ ಬರುವ ಕೊಳಚೆ ನೀರನ್ನು ಈಗಾಗಲೇ ಸ್ಥಾಪಿತವಾಗಿರುವ ಎರಡು ಪ್ರಾಥಮಿಕ ಶುದ್ಧೀಕರಣ ಘಟಕಗಳಲ್ಲಿ ಸಂಸ್ಕರಿಸಿ ಹೊರ ಬಿಡಲಾಗುತ್ತಿದೆ. ಹೆಬ್ಬಾಳ ಕಣಿವೆಯಲ್ಲಿ ಬರುವ ಕೊಳಚೆ ನೀರು ಶುದ್ಧೀಕರಣವಿಲ್ಲದೆ ಕೆರೆಯನ್ನು ಸೇರುತ್ತಿದೆ.

ಆ) ಹೌದು.

ಇ) ಬೆಂಗಳೂರು ಜಲ ಮಂಡಲಿಯು ಈಗ ಕೋರಮಂಗಲ ಚಳ್ಳಗಟ್ಟ ಹಾಗೂ ವೃಷಭಾವತಿ ಕಣಿವೆಗಳಲ್ಲಿ ಸ್ಥಾಪಿತವಾಗಿರುವ ಪ್ರಾಥಮಿಕ ಶುದ್ಧೀಕರಣ ಘಟಕಗಳನ್ನು ವಿಸ್ತರಿಸಿ ಮಾಧ್ಯಮಿಕ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸುವ ಹಾಗೂ ಹೆಬ್ಬಾಳ ಕಣಿವೆಯಲ್ಲಿ ಸಹಾ ಒಂದು ಮಾಧ್ಯಮಿಕ ಶುದ್ಧೀಕರಣ ಘಟಕವನ್ನು ಸ್ಥಾಪಿಸುವ ಯೋಜನೆಗಳನ್ನು ಹಾಕಿಕೊಂಡಿದೆ.

ಸಂಳ್ಯ ವಿಧಾನ ಸಭಾ ಕ್ಷೇತ್ರಕ್ಕೆ ಸಾರಿಗೆ ಬಸ್ಸಿನ ವ್ಯವಸ್ಥೆ

೫೧೦. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಸಾರಿಗೆ ಮಂತ್ರಿ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಅಧಿವೇಶನ ಸಮಯದಲ್ಲಿ ಸುಳ್ಯ ವಿಧಾನ ಸಭಾ ಕ್ಷೇತ್ರಕ್ಕೆ ಕೆಲವು ಸಾರಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡುವುದಾಗಿ ಸರ್ಕಾರದವರು ಭರವಸೆ ನೀಡಿದ್ದರೂ ಈ ತನಕ ಬಸ್ಸುಗಳ ವ್ಯವಸ್ಥೆ ಆಗದೆ ಇರುವುದಕ್ಕೆ ಕಾರಣವೇನು.

ಆ) ಇನ್ನಾದರೂ ಕೋರಿರುವ ಬಸ್ಸುಗಳನ್ನು ತಕ್ಷಣ ಒದಗಿಸಲಾಗುವುದೇ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ರಾಜ್ಯ ಸಚಿವರು),—

ಅ) ಮತ್ತು ಆ) ಮಾನ್ಯ ಸದಸ್ಯರ ಸಲಹೆಗಳನ್ನು ಪರಿಶೀಲಿಸಲಾಗುವುದು. ವಾಹನಗಳು ಓಡಾಡಲು ಎಲ್ಲೆಲ್ಲಿ ರಸ್ತೆಗಳು ಯೋಗ್ಯವಾಗಿವೆಯೋ ಅಲ್ಲಿ ಸಾರಿಗೆ ಸೇವೆಯನ್ನು ಒದಗಿಸಲಾಗುವುದು

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ನೌಕರರು ಖಾದಿಯನ್ನು ಧರಿಸುವ ಬಗ್ಗೆ ಇತ್ಯಾದಿ

೬೪೬. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ನೌಕರರು ಖಾದಿಯನ್ನು ಧರಿಸಬೇಕೆಂಬ ನಿಯಮವಿದೆಯೇ

ಆ) ಈ ನಿಯಮವನ್ನು ನೌಕರರು ಪಾಲಿಸುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ